ಕಳುಹಿಸಲು ಕ್ರಮ ಕೈಗೊಳ್ಳಲಾಗಿರುವುದರಿಂದ ವಿದೇಶ ಪ್ರವಾಸ ಕಾರ್ಯಕ್ರಮವನ್ನು ತಡೆಹಿಡಿಯಲಾಗಿದೆ.

ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯ ಕಾರ್ಯ ಚಟುವಟಿಕೆಗಳು

62(193); ಶ್ರೀ ಹ್ಯಾರಿಸ್.ಎನ್.ಎ

ಅ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಾಗಿನಿಂದ ತೋಟಗಾರಿಕೆ ಬೆಳೆಗಳ ಮಹತ್ವ ಸಂಶೋಧನೆ, ವಿಸ್ತರಣೆ ಮತ್ತು ಶಿಕ್ಷಣವನ್ನು ನೀಡುವಲ್ಲಿ ಹಮ್ಮಿಕೊಂಡ ಗುರಿ ಮತ್ತು ಸಾಧನೆಗಳ ವಿವರಗೇನು;

ಆ) ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತೋಟಗಾರಿಕೆ ವಿಶ್ವವಿದ್ಯಾಲಯದಕ್ಕೆ ಈ ಅವಧಿಯಲ್ಲಿ ಮಂಜೂರು ಮಾಡಿದ ಅನುದಾನದ ಮೊತ್ತ ಎಷ್ಟು;

ಇ) ಉತ್ತರ ಕರ್ನಾಟಕ ಭಾಗದಲ್ಲಿ ತೋಟಗಾರಿಕೆ ಬೆಳೆಗಳ ವಲಯಕ್ಕೆ ವಿಶ್ವವಿದ್ಯಾಲಯ ಸಲ್ಲಿಸಿದ ಸೇವೆ ಮತ್ತು ಭಾಗದ ಜನರಿಗೆ ನೂತನ ತೋಟಗಾರಿಕೆ ಕುರಿತ ಶಿಕ್ಷಣ ಮತ್ತು ಮಾರುಕಟ್ಟೆ ಅಭಿವೃದ್ಧಿ ನಿಟ್ಟಿನಲ್ಲಿ ವಿಶ್ವವಿದ್ಯಾಲಯದ ಗಣನೀಯ ಕೊಡುಗೆ ಏನು (ವಿವರ ಒದಗಿಸುವುದು)?

ಡಾ॥ ಶಾಮನೂರು ಶಿವಶಂಕರಪ್ಪ (ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ಸಂಶೋಧನಾ ನಿರ್ದೇಶನಾಲಯ, ರೈತ ಸಮುದಾಯವು ವಿವಿಧ ತೋಟಗಾರಿಕೆ ಬೆಳೆಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ವಿಶೇಷ ಗಮನ ಹರಿಸುತ್ತ ಬಂದಿದೆ. ತನ್ನ ವ್ಯಾಪ್ತಿಯಲ್ಲಿ ರಾಜ್ಯಾದ್ಯಂತ 10 ಸಂಶೋಧನಾ ಕೇಂದ್ರಗಳನ್ನು ಹಾಗೂ 12 ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳನ್ನು ಹೊಂದಿದ್ದು, ಆಯಾ ಪ್ರದೇಶಗಳಲ್ಲಿ ಸ್ಥಾನಿಕವಾಗಿ ಪ್ರಮುಖವಾಗಿರುವ ತೋಟಗಾರಿಕೆ ಬೆಳೆಗಳಲ್ಲಿರುವ ಸಮಸ್ಯೆಗಳನ್ನು, ರೈತರು ಹಾಗೂ

ವಿಸ್ತರಣಾ ಕಾರ್ಯಕರ್ತರಿಂದ ಹಾಗೂ ಇತರೆ ಪಾಲುದಾರರಿಂದ ಅರಿತುಕೊಂಡು, ಅಂತಹ ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಹಾಗೂ ಆರ್ಥಿಕವಾಗಿ ಲಾಭದಾಯಕವಾಗಿರುವ ಪರಿಹಾರೋಪಾಯಗಳನ್ನು ಕಂಡು ಹಿಡಿಯಲು ಯೋಜನೆ ಹಮ್ಮಿಕೊಳ್ಳುತ್ತಾ ಬಂದಿದೆ.

ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ಸಂಶೋಧನೆಗೆ ಆಯ್ಕೆ ಮಾಡಿದ ಬೆಳೆಗಳನ್ನು ವಿವರವನ್ನು **ಅನುಬಂಧ–1 ಮತ್ತು 2** ರಲ್ಲಿ ವಿವರಿಸಲಾಗಿದೆ.

ಆ) ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ವಿಶ್ವವಿದ್ಯಾಲಯಕ್ಕೆ ಇಲ್ಲಿಯವರೆಗೂ ಒಟ್ಟು ₹ 33,552.34 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ. ಇದರ ವಿವರ **ಅನುಬಂಧ–3** ರಲ್ಲಿ ನೀಡಲಾಗಿದೆ.

ಇ) ತೋವಿವಿ ಬಾಗಲಕೋಟೆಯು ರಾಜ್ಯಾದಾದ್ಯಂತ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆ ಚಟುವಟಿಕೆಗಳನ್ನು ತ್ವರಿತ ಗತಿಯಲ್ಲಿ ಹಮ್ಮಿಕೊಂಡಿದೆ. ವಿಶ್ವ ವಿದ್ಯಾಲಯದ ಕೇಂದ್ರ ಸ್ಥಾನವು ಉತ್ತರ ಕರ್ನಾಟಕದ ಬಾಗಲಕೋಟೆಯಲ್ಲಿದ್ದು, ಈ ಭಾಗದ ರೈತರು ತೋಟಗಾರಿಕೆ ಶಿಕ್ಷಣ, ಸಂಶೋಧನೆಯ ಹೆಚ್ಚಿನ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ. ಇದರ ವಿವರವನ್ನು **ಅನುಬಂಧ– 1 ಮತ್ತು 2** ದಲ್ಲಿ ನೀಡಲಾಗಿದೆ.

ಅನುಬಂಧ–1

ತೋಟಗಾರಿಕೆ ಬೆಳೆಗಳ ಸಂಶೋಧನೆಯ ವರದಿ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ಸಂಶೋಧನಾ ನಿರ್ದೇಶನಾಲಯ, ರೈತ ಸಮುದಾಯವು ವಿವಿಧ ತೋಟಗಾರಿಕೆ ಬೆಳೆಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುವ ನಿಟ್ಟಿನಲ್ಲಿ ವಿಶೇಷ ಗಮನಹರಿಸುತ್ತ ಬಂದಿದೆ. ತನ್ನ ವ್ಯಾಪ್ತಿಯಲ್ಲಿ ರಾಜ್ಯಾದ್ಯಂತ 10 ಸಂಶೋಧನಾ ಕೇಂದ್ರಗಳನ್ನು ಹಾಗೂ 12 ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳನ್ನು ಹೊಂದಿದ್ದು, ಆಯಾ ಪ್ರದೇಶಗಳಲ್ಲಿ ಸ್ಥಾನಿಕವಾಗಿ ಪ್ರಮುಖವಾಗಿರುವ ತೋಟಗಾರಿಕೆ ಬೆಳೆಗಳಲ್ಲಿರುವ ಸಮಸ್ಯೆಗಳನ್ನು, ರೈತರು ಹಾಗೂ ವಿಸ್ತರಣಾ ಕಾರ್ಯಕರ್ತರಿಂದ ಹಾಗೂ ಇತರೆ ಪಾಲುದಾರರಿಂದ ಅರಿತುಕೊಂಡು, ಅಂತಹ ಸಮಸ್ಯೆಗಳಿಗೆ ಪರಿಣಾಮಕಾರಿಯಾದ ಹಾಗೂ ಆರ್ಥಿಕವಾಗಿ ಲಾಭದಾಯಕವಾಗಿರ ತಕ್ಕ ಪರಿಹಾರೋಪಾಯಗಳನ್ನು ಕಂಡು ಹಿಡಿಯುವದಕ್ಕಾಗಿ ಯೋಜನೆ ಹಮ್ಮಿಕೊಳ್ಳುತ್ತಾ ಬಂದಿದೆ.

ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯವು ವಿವಿಧ ಸಂಶೋಧನಾ ಕೇಂದ್ರಗಳಲ್ಲಿ ಸಂಶೋಧನೆಗೆ ಆಯ್ಕೆ ಮಾಡಿದ ಬೆಳೆಗಳನ್ನು ಕೋಷ್ಟಕದಲ್ಲಿ ವಿವರಿಸಲಾಗಿದೆ.

ಅ) ವಲಯ ತೋಟಗಾರಿಕೆ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳು:

ಕ್ರ.ಸಂ	ಸಂಶೋಧನಾ ಕೇಂದ್ರಗಳು	ಸ್ಥಾಪನೆಗೊಂಡ ವರ್ಷ	ಕ್ಷೇತ್ರ (ಪ)	ಮುಖ್ಯ ಬೆಳೆಗಳು
01	ಮುಖ್ಯ ತೋ ಸಂ ವಿ ಕೇ, ಬಾಗಲಕೋಟ	2009	120 00	ದಾಳಿಂಬೆ, ಮಾವು, ಚಿಕ್ಕು, ತೆಂಗು, ತರಕಾರಿಗಳು, ಹೂವುಗಳು ಮತ್ತು ಸುಗಂಧಿತ ಸಸ್ಯಗಳು
1	ತೋ.ಸಂ ಕೇ, ಬಿಜಾಪೂರ (ತಿಡಗುಮದಿ)	2002	20 25	ದ್ರಾಕ್ಷಿ, ದಾಳಿಂಗ, ನಿಂಬೆ, ಅಂಜೂರ, ನೇರಳೆ ಮತ್ತು ಅನೋನಾ
02	ವ ತೋ ಸಂ ವಿ ಕೇ, ಧಾರವಾಡ (ಕುಂಭಾಪುರ)	1994	49 20	ಮಾವು, ಪೇರಲ, ಚಿಕ್ಕು ಮತ್ತು ಅಲೂಗಡ್ಡೆ
1	ತೋ ಸಂ.ಕೇ, ಹಾವೇರಿ (ದೇವಿಹೊಸೂರ)	2000	38 25	ಮಣಸಿನಕಾಯಿ, ಬಳ್ಳಿಪೈ, ತರಕಾರಿಗಳು ಮತ್ತು ವಾರ್ಷಿಕ ಮಸಾಲೆ ಬೆಳೆಗಳು
2	ತೋ ಸಂ.ಕೇ, ಬೆಳಗಾವಿ (ಕಣಬರ್ಗಿ)	1986	08.45	ಹೂವುಗಳು ಮತ್ತು ತರಕಾರಿಗಳು
3	ತೋ ಸಂ ಕೇ, ಹಿಡಕಲ್ ಡ್ಯಾಮ್	2009	27 20	ಮಾವು, ಚಿಕ್ಕು, ಔಷಧಿ ಮತ್ತು ಸುಗಂಧಿ ಸಸ್ಯಗಳು

4	ತೋ.ಸಂ.ಕೇ, ಶಿರಸಿ	1965	07.10	ಅಡಿಕೆ, ಮಣಸು, ಏಲಕ್ಕಿ, ಅನಾನಸ್, ಔಷದಿ ಸಸ್ಯಗಳು ಮತ್ತು ಗಾರ್ಸಿನಿಯಾ
03	ವ ತೋ ಸಂ.ವಿ.ಕೇ, ಬೆಂಗಳೂರು	2009	100	ಹೈ ಟೆಕ್ ತೋಟಗಾರಿಕೆ ಬೆಳೆಗಳು ಮಾವು, ಚಿಕ್ಕು, ಪೇರಲ, ಹೂವುಗಳು, ಔಷಧಿ ಮತ್ತು ಸುಗಂಧಿ ಬೆಳೆಗಳು
1	ತೋ ಸಂ ಕೇ, ಅರಸಿಕೆರೆ	1958	48 61	ತೆಂಗು, ತೆಂಗು ಆಧಾರಿತ ಬೇಸಾಯ ಪದ್ಧತಿ
2	ತೋ.ಸಂ ಕೇ, ಶ್ರೀನಿವಾಸಪುರ (ಹೊಗಳಗೆರೆ)	2009	60 00	ಗೋಡಂಬಿ, ಮಾವು, ಖುಷ್ಕಿ ಪ್ರದೇಶದ ಹಣ್ಣುಗಳು ಮತ್ತು ತರಕಾರಿಗಳು

ಬ) ಅಖಿಲ ಭಾರತೀಯ ಸಮನ್ವಯ ಸಂಶೋಧನಾ ಯೋಜನೆಗಳು:

ಕ್ರ.ಸಂ.	ಅ.ಭಾ.ಸ.ಸಂ.ಯೋಜನೆ	ಪ್ರಾರಂಭವಾದ ವರ್ಷ	ಸ್ಥಳ
01	ತಾಳೆ	1987	ಗಂಗಾವತಿ
02	ಮಸಾಲೆ ಬೆಳೆಗಳು	2006–07	ಶಿರಸಿ
03	ತೆಂಗು	1976	ಅರಸಿಕೆರೆ
04	ಆಲೂಗಡ್ಡೆ	1993	ಧಾರವಾಡ
05	ತರಕಾರಿಗಳು	1995	ಧಾರವಾಡ
06	ಹಣ್ಣುಗಳು	1994	ಅರಭಾವಿ
07	ಗಡ್ಡೆ ತರಕಾರಿ	2011	ಧಾರವಾಡ
08	ಗೋಡಂಬಿ	1982	ಹೊಗಳಿಗೆರೆ
09	ಆಲೂಗಡ್ಡೆ	1993	ಹಾಸನ
10	ಗೋಡಂಬಿ (ಸ್ವಯಂ ಕೇಂದ್ರಗಳು)	2009	ಕೆಣಬರ್ಗಿ

ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಅಭಿವೃದ್ಧಿ ಪಡಿಸಿದ ತಳಿಗಳು ಹಾಗೂ ತಂತ್ರಜ್ಞಾನಗಳು:

1. ತಳಿಗಳು

- ನುಗ್ಗೆ : ಭಾಗ್ಯ (ಕೆ.ಡಿ.ಎಮ್-1)
- ದೊಣ್ಣೆ ಮೆಣಸಿನಕಾಯಿ : ಅಪೂರ್ವ (ಸಿಪಿ-40)
- ಮೆಣಸಿನಕಾಯಿ (ಜಿ.ಸಿ.ಎಸ್ - 94/68
- ಸೇವಂತಿ : ದುಂಡಿ
- ತೆಂಗು : ಕಲ್ಪತರು ಮತ್ತು ಸಂಕರಣ ತಳಿ (GBD X Fiji, GBDX PHOT & GBD X LCO)
- ಕರಿಮೆಣಸಿನಲ್ಲಿ : ಅಡಿಮನೆ

ಕ್ರ.ಸಂ.	ನಿರ್ಧಾರಗಳು	ಒಟ್ಟು
01	ತೋಟಗಾರಿಕೆ ಕೈಪಿಡಿಗೆ ಸೇರಿರುವ ತಂತ್ರಜ್ಞಾನಗಳು	
	ಬೆಳೆ ಸುಧಾರಣೆ (ಆಲೂಗಡ್ಡೆ ಗೋಡಂಬಿ ಇತ್ಯಾದಿ)	04
	ಬೆಳೆ ಉತ್ಪಾದನೆ (ಚಿಕ್ಕು, ದಾಳಿಂಬೆ, ಪೇರಲ, ತರಕಾರಿ, ಇತ್ಯಾದಿ)	21
	ಬೆಳೆ ಸಂರಕ್ಷಣೆ (ಬಾಳೆ, ಸಪೋಟ, ಮೆಣಸಿನಕಾಯಿ, ಶುಂಠಿ, ಇತ್ಯಾದಿ)	09
	ಕೊಯ್ಲೋತ್ತರ ತಂತ್ರಜ್ಞಾನ (ಸೀತಾಫಲ, ಮೆಣಸಿನಕಾಯಿ, ಇತ್ಯಾದಿ)	03
	ಒಟ್ಟು	44
02	ಕ್ಷೇತ್ರಿಯ ಪ್ರಾತ್ಯಕ್ಷಿಕೆಗಳು	
	ಬೆಳೆ ಸುಧಾರಣೆ (ಈರುಳ್ಳಿ, ಬೆಳ್ಳುಳ್ಳಿ, ಇತ್ಯಾದಿ ತರಕಾರಿ ಬೆಳೆಗಳು)	12
	ಬೆಳೆ ಉತ್ಪಾದನೆ (ಬಾಳೆ ಆಲೂಗಡ್ಡೆ, ಇತ್ಯಾದಿ ತರಕಾರಿ ಬೆಳೆಗಳು)	08

ವಿಸ್ತರಣೆ

ವಿಸ್ತರಣಾ ಯೋಜನೆಯು ತಾಂತ್ರಿಕ ವಿಷಯಗಳ ಬಗ್ಗೆ ಅರಿವು ಮೂಡಿಸಿ ಅನುಷ್ಠಾನಗೊಳಿಸಲು ಉತ್ಪಾದನಾ ಪಾಲುದಾರರು, ತೋಟಗಾರಿಕಾ ಉತ್ಪಾದನೆಗಳ ಸಂಸ್ಕರಣಾ ಹಾಗೂ ಮಾರಾಟಗಾರರಿಗೆ ತಿಳಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ವಿಸ್ತರಣಾ ಯೋಜನೆಯಡಿಯಲ್ಲಿ ಪ್ರಮುಖವಾಗಿ ಕೈಗೊಳ್ಳುತ್ತಿರುವ ಚಟುವಟಿಕೆಗಳು ಈ ಕೆಳಗಿನಂತಿವೆ.

☐ ವಿವಿಧ ತೋಟಗಾರಿಕಾ ಬೆಳೆಗಳ ಉತ್ಪಾದನಾ ಸಾಮರ್ಥ್ಯ ಹೊಂದಿರುವ ಸೂಕ್ತವಾದ ಭೂಮಿಯನ್ನು ಗುರುತಿಸುವುದು.

- ☐ ಮುಂದುವರೆದ ಪ್ರಗತಿಪರ ರೈತರು ಹಾಗೂ ಸಾಮಾನ್ಯ ಮಾಧ್ಯಮವರ್ಗದ ರೈತರು ಬೆಳೆದ ಬೆಳೆಯ ಉತ್ಪಾದನಾ ಸಾಮರ್ಥ್ಯವನ್ನು ಕಂಡುಕೊಳ್ಳುವುದು.
- ☐ ಒಂದು ಅಥವಾ ಎರಡು ಅಥವಾ ಒಂದಕ್ಕಿಂತ ಹೆಚ್ಚು ಬೆಳೆಗಳ ಅಂತರ ಬೆಳೆ ಪದ್ಧತಿಯನ್ನು ಅನುಸರಿಸುವುದು.
- ☐ ಉತ್ಪಾದನಾ ಸಾಮರ್ಥ್ಯವನ್ನು ಆಧರಿಸಿ ಆಯಾ ಪ್ರದೇಶಕ್ಕೆ ಸೂಕ್ತವಾದ ಬೆಳೆಗಳನ್ನು ಬೆಳೆಯಲು ಸೂಚಿಸುವುದು.
- ☐ ಪ್ರಗತಿ ಪರ ರೈತರನ್ನು, ತಾಂತ್ರಿಕತೆಯ ತಾಕುಗಳನ್ನು / ಪ್ರಯೋಗಗಳನ್ನು ನೀಡಲು ಸಂಪನ್ಮೂಲ ವ್ಯಕ್ತಿಗಳಾಗುವಂತೆ ಪ್ರೇರೇಪಿಸುವುದು.
- ☐ ರೈತರಿಗೆ ಕೃಷಿ ಉಪಕರಣಗಳು ಹಾಗೂ ಸಸಿಗಳನ್ನು / ಬೀಜಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸುವುದು.
- ☐ ಅನುಭವಸ್ಥ ರೈತರು, ವಿಸ್ತರಣಾ ಪರಿಣಿತರು ಮತ್ತು ವಿಷಯ ತಜ್ಞರನ್ನೊಳಗೊಂಡ ರೈತ ಮಾಹಿತಿ ತಂಡವನ್ನು ರಚಿಸುವುದು.
- ☐ ರೈತರ ಸಾಮರ್ಥ್ಯ ಹಾಗೂ ಪ್ರಾವೀಣ್ಯತೆ ಹೆಚ್ಚಿಸಲು, ಸಂಪನ್ಮೂಲಗಳ ನಿರ್ವಹಣೆ, ಬಿತ್ತಣೆಯ ತಾಂತ್ರಿಕತೆ, ಕೋಯ್ಲೋತ್ತರ ತಾಂತ್ರಿಕತೆ, ಸಂಸ್ಕರಣೆ ಹಾಗೂ ಮಾರಾಟ ನಿರ್ವಹಣೆ ತಾಂತ್ರಿಕತೆಗಳ ತರಬೇತಿ ಕಾರ್ಯಕ್ರಮಗಳನ್ನು ನೀಡುವುದು.
- ☐ ಕೊಂಡುಕೊಳ್ಳುವವರ ಹಾಗೂ ಮಾರಾಟಗಾರರ ಸಭೆ ಅಥವಾ ಮಾರಾಟ ಮೇಳಗಳನ್ನು ಏರ್ಪಡಿಸುವುದರ ಮೂಲಕ ಉತ್ತಮ ಮಾರಾಟ ಸೌಕರ್ಯವನ್ನು ಒದಗಿಸುವುದು.
- ☐ ವಿಸ್ತರಣಾ ಮಾರುಕಟ್ಟೆಯ ಮೂಲಕ ಉತ್ಪಾದನಾ ಹಾಗೂ ಬೇಡಿಕೆಯ ಮಾದರಿಯನ್ನು ತಯಾರಿಸುವದು. ಸಂಸ್ಕರಣೆ ಸಂಗ್ರಹಣೆ ಹಾಗೂ ಮಾರಾಟದ ಬೇರೆ ಬೇರೆ ಬೆಳೆಗಾರರ "ಉತ್ಪಾದಕರ ಕ್ಲಬ್‌ಗಳನ್ನು" ಅಭಿವೃದ್ಧಿಗೊಳಿಸುವುದು.

ತಾಂತ್ರಿಕತೆಗಳ ವರ್ಗಾವಣೆಯಲ್ಲಿ ಪಾಲುದಾರಿಕೆ:

ಉತ್ಪಾದಕರು ಹಾಗೂ ಮಾರಾಟಗಾರರ ನಡುವೆ ಉತ್ತಮವಾದ ಸಂಪರ್ಕ ಸರಪಳಿಯನ್ನು ಅಭಿವೃದ್ಧಿಸಲು ಇದರಲ್ಲಿ ಬರುವ ಪ್ರಮುಖ ಪಾಲುದಾರರೆಂದರೆ "ಪಾಲುದಾರಿಕೆ" ವಿಸ್ತರಣಾ ವಿಧಾನವನ್ನು ಅನುಸರಿಸುವುದು.

- ☐ ಕರ್ನಾಟಕ ಸರ್ಕಾರದ ತೋಟಗಾರಿಕೆ ವಿಭಾಗದ ಎಲ್ಲಾ ಘಟಕಗಳು.
- ☐ ವಿಶ್ವವಿದ್ಯಾಲಯಗಳ ತೋಟಗಾರಿಕೆ ವಿಸ್ತರಣಾ ಕೇಂದ್ರಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು.
- ☐ ವಿವಿಧ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳು
- ☐ ಪ್ರಗತಿಪರ ರೈತರ ಸಂಸ್ಥೆಗಳು / ಸಂಘಗಳು
- ☐ ಬೆಳಗಳಿಗುಣುವಾಗಿ ಸಲಹಾ ಮಂಡಳಿಗಳು
- ☐ ಅಭಿವೃದ್ಧಿಶೀಲ ಕಂಪನಿಗಳು ಹಾಗೂ ಘಟಕಗಳು
- ☐ ಆಸಕ್ತಿಯುಳ್ಳ ವಿವಿಧ ಗುಂಪುಗಳು, ಇತ್ಯಾದಿ.

ಸಂವಹನ ಮತ್ತು ಪ್ರಕಟನಾ ಕೇಂದ್ರ:

ತೋಟಗಾರಿಕೆ ವಿಶ್ವವಿದ್ಯಾಲಯದ ಪ್ರಕಟನಾ ಕೇಂದ್ರವು ಪ್ರಮುಖವಾಗಿ ಉತ್ತಮ ಬೇಸಾಯಕ್ರಮಗಳು, ಮಾಸಿಕ ಪುರವಣಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವಾರ್ತಾ ಪತ್ರಿಕೆ, ಲಘುಪ್ರಕಟಣೆಗಳು, ಸಂಶೋಧನಾ ಪತ್ರಿಕೆಗಳು ಹಾಗೂ ವಾರ್ಷಿಕ / ಮಾಸಿಕ ನಿಯತಕಾಲಿಕೆಗಳು, ಇತ್ಯಾದಿಗಳನ್ನು ಪ್ರಕಟಿಸುವ ಜವಾಬ್ದಾರಿಯನ್ನು ಹೊಂದಿದೆ ಹಾಗೂ ರೇಡಿಯೋ, ದೂರದರ್ಶನಗಳ ಮೂಲಕ ತೋಟಗಾರಿಕೆಯ ತಾಂತ್ರಿಕೆಗಳನ್ನು ಜನರಿಗೆ ಮಟ್ಟಿಸುವ ಕಾರ್ಯವನ್ನು ಕೈಗೊಳ್ಳುತ್ತಿದೆ.

ಕೃಷಿ ವಿಜ್ಞಾನ ಕೇಂದ್ರ:

ಕೃಷಿ ಅನುಸಂಧಾನ ಪರಿಷತ್, ನವ ದೆಹಲಿಯು ನಮ್ಮ ತೋಟಗಾರಿಕೆ ವಿಜ್ಞಾನಗಳ ವಿದ್ಯಾಲಯಕ್ಕೆ ದಿನಾಂಕ ೬.೧೨.೨೦೧೨ ರಂದು ಕೃಷಿ ವಿಜ್ಞಾನ ಕೇಂದ್ರವನ್ನು ಮಂಜೂರು ಮಾಡಿ ೨೦೧೩-೧೪ ನೇ ಸಾಲಿಗೆ ₹ ೭೭.೭೦ ಲಕ್ಷ ರೂಪಾಯಿಗಳ ಅನುದಾನವನ್ನು ನೀಡಿದೆ. ಈ ಕೃಷಿ ವಿಜ್ಞಾನ ಕೇಂದ್ರವು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಮೊದಲ ಕೃಷಿ ವಿಜ್ಞಾನ ಕೇಂದ್ರವಾಗಿ ಕೋಲಾರ ಜಿಲ್ಲೆಯ ತಮಕಾ ಫಾರ್ಮದಲ್ಲಿ ಸ್ಥಾಪಿಸಲಾಗಿದ್ದು ದಿನಾಂಕ ೧೬.೧೨.೧೦೧೨ ರಿಂದ ಕಾರ್ಯ ನಿರ್ವಹಿಸುತ್ತಿದೆ.

ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕಗಳು (HEEUs):

ತೋಟಗಾರಿಕೆ ವಿಶ್ವವಿದ್ಯಾಲಯ ತಂತ್ರಜ್ಞಾನಗಳ ವಿಸ್ತರಣಾ ಕೇಂದ್ರವು ಜ್ಞಾನ ಹಾಗೂ ಸಂಪನ್ಮೂಲದ ಕೇಂದ್ರವಾಗಿದ್ದು, ಈ ಕೆಳಗಿನ ಗುರಿಗಳನ್ನು ಹೊಂದಿದೆ:

ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕಗಳು (HEEUs)

ಕ್ರ.ಸಂ.	ವಿಸ್ತರಣಾ ಶಿಕ್ಷಣ ಘಟಕಗಳು	ಸ್ಥಳ	ವ್ಯಾಪ್ತಿಯ ಜಿಲ್ಲೆಗಳು
1.	ವಿಸ್ತರಣಾ ಶಿಕ್ಷಣ ಘಟಕ	ಬೀದರ	ಬೀದರ, ಗುಲ್ಬರ್ಗಾ, ಮತ್ತು ಯಾದಗಿರಿ
2.	ವಿಸ್ತರಣಾ ಶಿಕ್ಷಣ ಘಟಕ	ಕೋಲಾರ	ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ
3.	ವಿಸ್ತರಣಾ ಶಿಕ್ಷಣ ಘಟಕ	ಮೈಸೂರು	ಮೈಸೂರು, ಚಾಮರಾಜನಗರ, ಮಂಡ್ಯ, ಮತ್ತು ಕೊಡಗು
4.	ವಿಸ್ತರಣಾ ಶಿಕ್ಷಣ ಘಟಕ	ಅರಭಾವಿ	ಬೆಳಗಾವಿ
5.	ವಿಸ್ತರಣಾ ಶಿಕ್ಷಣ ಘಟಕ	ಧಾರವಾಡ	ಧಾರವಾಡ ಮತ್ತು ಗದಗ
6.	ವಿಸ್ತರಣಾ ಶಿಕ್ಷಣ ಘಟಕ	ಬಾಗಲಕೋಟ	ಬಾಗಲಕೋಟ
7.	ವಿಸ್ತರಣಾ ಶಿಕ್ಷಣ ಘಟಕ	ಮುನಿರಬಾದ	ಕೊಪ್ಪಳ, ಬಳ್ಳಾರಿ, ಮತ್ತು ರಾಯಚೂರು.
8.	ವಿಸ್ತರಣಾ ಶಿಕ್ಷಣ ಘಟಕ	ಶಿರಸಿ	ಶಿರಸಿ
9.	ವಿಸ್ತರಣಾ ಶಿಕ್ಷಣ ಘಟಕ	ದೇವಿಹೊಸುರ	ಹಾವೇರಿ
10.	ವಿಸ್ತರಣಾ ಶಿಕ್ಷಣ ಘಟಕ	ಬಿಜಾಪುರ	ಬಿಜಾಪುರ

11.	ವಿಸ್ತರಣಾ ಶಿಕ್ಷಣ ಘಟಕ	ಅರಸಿಕೇರೆ	ಹಾಸನ
12.	ವಿಸ್ತರಣಾ ಶಿಕ್ಷಣ ಘಟಕ	ಬೆಂಗಳೂರು	ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ)

- ☐ ಹೊಸದಾದ ತಾಂತ್ರಿಕತೆಗಳನ್ನು ರೈತರೊಂದಿಗೆ ಹಂಚಿಕೊಳ್ಳುವುದು ಹಾಗೂ ಅವರಿಗೆ ತರಬೇತಿ ನೀಡುವುದು.
- ☐ ತಾಂತ್ರಿಕತೆಯ ಪರಿಶೀಲನೆ, ಅವಧಿಯ ನಿರ್ಧಾರ ಮಾಡುವುದು, ಪ್ರಾಯೋಗಿಕ ವೀಕ್ಷಣೆ ಮತ್ತು ಪ್ರಚಾರ ಮಾಡುವುದು.
- ☐ ಅಗತ್ಯವಿರುವಂತಹ ವಿಸ್ತರಣಾ ಕಾರ್ಯಕರ್ತರಿಗೆ, ರೈತರಿಗೆ ಮತ್ತು ಆಯ್ದ ಗುಂಪುಗಳಿಗೆ ತರಬೇತಿ ಹಾಗೂ ಮಾಹಿತಿಗಳನ್ನು ಒದಗಿಸುವುದು.
- ☐ ರೈತರು ಮತ್ತು ರೈತ ಮಹಿಳೆಯರಿಗೆ ರೈತ ತರಬೇತಿ ಶಾಲೆಗಳ ಮೂಲಕ ಕೃಷಿಯ ಜ್ಞಾನವನ್ನು ನೀಡುವುದು.
- ☐ ನಿರ್ದಿಷ್ಟ ಬೆಳೆಗಳ ಬೆಳೆಗಾರರ ಅಥವಾ ರೈತರ ಗುಂಪುಗಳು/ನಿರ್ದಿಷ್ಟ ಉತ್ಪನ್ನಗಳ ಗುಂಪುಗಳನ್ನು ಸ್ಥಾಪಿಸುವುದು.
- ☐ ತೋವಿವಿಯ ವಿವಿಧ ತೋಟಗಾರಿಕೆ ವಿಸ್ತರಣಾ ಘಟಕಗಳಿಂದ ಪ್ರತಿ ವರ್ಷ ಸುಮಾರು ೫ ರಿಂದ ೬ ಸಾವಿರ ರೈತರಿಗೆ ತೋಟಗಾರಿಕೆ ಕುರಿತು ತರಬೇತಿ ನೀಡಲಾಗುವುದು.

ಜಿಲ್ಲಾ ಮಾಹಿತಿ/ಮಾರ್ಗದರ್ಶಕ ಕೇಂದ್ರಗಳು:

ನುರಿತ ವಿಜ್ಞಾನಿಗಳ ತಂಡಗಳನ್ನು ರಚಿಸಿ ರಾಜ್ಯ ಸರ್ಕಾರದ ತೋಟಗಾರಿಕಾ ವಿಭಾಗ ಮತ್ತು ಇತರ ೫ ವಿಭಾಗಗಳಿಗೆ ಜಿಲ್ಲಾಮಟ್ಟದ ಯೋಜನೆಯನ್ನು ತಯಾರಿಸುವಲ್ಲಿ, ATMA ಸಂಸ್ಥೆಯೊಂದಿಗೆ ಸಹಕರಿಸಲು ಯೋಜಿಸಲಾಗಿದೆ. ಈ ತಂಡ ಎಲ್ಲಾ ಸಮಸ್ಯೆಗಳಿಗೆ ಪರಿಹಾರ/ ಸಲಹೆ ಸೂಚನೆಗಳನ್ನು ನೀಡುವಲ್ಲಿಯೂ ಸಹ ಸಹಕಾರಿಯಾಗುತ್ತದೆ. ಕೀಟ ಅಥವಾ ಸಸ್ಯ ರೋಗಗಳ ನಿಯಂತ್ರಣ, ವ್ಯವಸಾಯ ಪದ್ಧತಿಗಳನ್ನು ಸಹ ವಿವರಿಸಲು ತಂಡಗಳು ಸಹಕಾರಿಯಾಗುವವು. ಅಷ್ಟೇ ಅಲ್ಲದೇ, ತೋಟಗಾರಿಕೆ ವಿಶ್ವವಿದ್ಯಾಲಯವು ಕನ್ನಡ ಪ್ರಸಾರಂಗ ವಿಭಾಗವನ್ನು ಸಹ ಆರಂಭಿಸಲು ಯೋಚಿಸಿದೆ.

ತೋಟಗಾರಿಕೆ ಮೇಳ:

ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ತೋಟಗಾರಿಕೆ ಮೇಳವನ್ನು ಆಯೋಜಿಸಲಾಗುತ್ತಿದ್ದು, ಇದರಿಂದ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರಗಳಲ್ಲಿ ಕಂಡು ಹಿಡಿದ ಹೊಸ ತಾಂತ್ರಿಕತೆಗಳನ್ನು, ಹೊಸ ತಳಿಗಳನ್ನು, ಹೊಸ ಯಂತ್ರೋಪಕರಣಗಳನ್ನು ಮತ್ತು ತಯಾರಿಸಿದ ಉತ್ಪನ್ನಗಳನ್ನು ರೈತರ ಮಾಹಿತಿಗಾಗಿ ಪ್ರದರ್ಶಿಸಲಾಗುತ್ತದೆ. ೨೦೧೧ ರಲ್ಲಿ ತೋವಿವಿಯ ೧ನೇ ತೋಟಗಾರಿಕೆ ಮೇಳದಲ್ಲಿ ಸುಮಾರು ೫೦ ರಿಂದ ೬೦ ಸಾವಿರ ರೈತರು ಭಾಗವಹಿಸಿದರು ಮತ್ತು ೨೦೧೩ರಲ್ಲಿ ೨ನೇ ತೋಟಗಾರಿಕೆ ಮೇಳದಲ್ಲಿ ಸುಮಾರು ೨.೫ ರಿಂದ ೩ ಲಕ್ಷ ರೈತರು ಸದುಪಯೋಗ ಪಡೆದುಕೊಂಡರು.

ತೋಟಗಾರಿಕೆ ವಿಶ್ವವಿದ್ಯಾಲಯದಲ್ಲಿ ಪ್ರತಿ ವರ್ಷ ತೋಟಗಾರಿಕೆ ಮೇಳವನ್ನು ಆಯೋಜಿಸಲಾಗುತಿದ್ದು, ಇದರಿಂದ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರಗಳಲ್ಲಿ ಕಂಡು ಹಿಡಿದ ಹೊಸ ತಾಂತ್ರಿಕತೆಗಳನ್ನು, ಹೊಸ ತಳಿಗಳನ್ನು, ಹೊಸ ಯಂತ್ರೋಪಕರಣಗಳನ್ನು ಮತ್ತು ತಯಾರಿಸಿದ ಉತ್ಪನ್ನಗಳನ್ನು ರೈತರ ಮಾಹಿತಿಗಾಗಿ ಪ್ರದರ್ಶಿಸಲಾಗುತ್ತದೆ.

ವಿಸ್ತರಣಾ ಕಾರ್ಯಕ್ರಮಗಳು:

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ವರ್ಷವಿಡೀ, ರೈತರಿಗೆ ಅನುಕೂಲವಾಗುವಂತೆ ಹಲವಾರು ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ರೈತರ ಚರ್ಚೆ, ವಿವಿಧ ರಾಷ್ಟ್ರೀಯ ಹಾಗೂ ರಾಜ್ಯ ಸರಕಾರದ ದಿನಾಚರಣೆಗಳು, ಕ್ಷೇತ್ರೋತ್ಸವ, ಪ್ರಚಾರ ಕಾರ್ಯಗಳು, ಸಂಸ್ಥಾಪನಾ ದಿನಾಚರಣೆ ಇತ್ಯಾದಿಗಳನ್ನು ಏರ್ಪಡಿಸಲಾಗುತ್ತಿದೆ

ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಅನುಬಂಧ–2

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಶಿಕ್ಷಣ ನೀಡುವಲ್ಲಿ ಹಮ್ಮಿಕೊಂಡ ಗುರಿ ಮತ್ತು ಸಾಧನೆಯ ವಿವರ

1. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಾಗಿನಿಂದ ಶಿಕ್ಷಣ ನೀಡುವಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಲೇಜುಗಳ ವಿವರ

ಕ್ರಸಂ	ಕಾಲೇಜಿನ ಹೆಸರು	ಸ್ಥಾಪನಾ ವರ್ಷ	ಪದವಿಗಳು
1	ತೋಟಗಾರಿಕೆ ಮಹಾವಿದ್ಯಾಲಯ, ಬಾಗಲಕೋಟ	2007–08	ಬಿ ಎಸ್ಸಿ (ತೋಟಗಾರಿಕೆ) ಎಂ ಎಸ್ಸಿ (ತೋಟಗಾರಿಕೆ) ಪಿ ಎಚ್ ಡಿ (ತೋಟಗಾರಿಕೆ)
2	ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾಲಯ, ಅರಭಾವಿ	1994–95	ಬಿ ಎಸ್ಸಿ (ತೋಟಗಾರಿಕೆ) ಎಂ ಎಸ್ಸಿ (ತೋಟಗಾರಿಕೆ) ಪಿ.ಎಚ್ ಡಿ (ತೋಟಗಾರಿಕೆ)
3	ತೋಟಗಾರಿಕೆ ಮಹಾವಿದ್ಯಾಲಯ, ಬೀದರ್	2006–07	ಬಿ.ಎಸ್ಸಿ (ತೋಟಗಾರಿಕೆ)
4	ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ	2009–10	ಬಿ.ಎಸ್ಸಿ (ತೋಟಗಾರಿಕೆ)
5	ತೋಟಗಾರಿಕೆ ಮಹಾವಿದ್ಯಾಲಯ, ಮುನಿರಾಬಾದ್	2010–11	ಬಿ ಎಸ್ಸಿ (ತೋಟಗಾರಿಕೆ)
6	ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರ್	2010–11	ಬಿ ಎಸ್ಸಿ (ತೋಟಗಾರಿಕೆ)
7	ತೋಟಗಾರಿಕೆ ಮಹಾವಿದ್ಯಾಲಯ, ಶಿರಸಿ	2010–11	ಬಿ.ಎಸ್ಸಿ (ತೋಟಗಾರಿಕೆ)
8	ತೋಟಗಾರಿಕೆ ಮಹಾವಿದ್ಯಾಲಯ, ಬೆಂಗಳೂರು	2010–11	ಎಂ ಎಸ್ಸಿ (ತೋಟಗಾರಿಕೆ) ಪಿ ಎಚ್ ಡಿ (ತೋಟಗಾರಿಕೆ)

ಪ್ರಸ್ತುತ ಎಂ. ಎಸ್ಸಿ (ತೋಟಗಾರಿಕೆ) ಪದವಿಯನ್ನು 9 ವಿಷಯಗಳಲ್ಲಿ ನಿಡುತ್ತಿದ್ದು, ಅವುಗಳ ವಿವರ: ಹಣ್ಣು ವಿಜ್ಞಾನ, ತರಕಾರಿ ವಿಜ್ಞಾನ, ಕೊಯ್ಲೋತ್ತರ ತಂತ್ರಜ್ಞಾನ, ಪುಷ್ಪ ಕೃಷಿ ಹಾಗೂ ತೋಟ ವಿನ್ಯಾಸ ವಿಭಾಗ, ನೆಡತೋಪು, ಮಸಾಲೆ, ಔಷಧಿ ಹಾಗೂ ಸುಗಂಧಿ ಸಸ್ಯಗಳ ವಿಭಾಗ, ಜೈವಿಕ ತಂತ್ರಜ್ಞಾನ ಮತ್ತು ಸಸ್ಯ ತಳಿ ಅಭಿವೃದ್ಧಿ ವಿಭಾಗ, ತೋಟಗಾರಿಕೆ ಕೀಟಶಾಸ್ತ್ರ ವಿಭಾಗ, ತೋಟಗಾರಿಕೆ ರೋಗಶಾಸ್ತ್ರ ವಿಭಾಗ, ಮಣ್ಣು ವಿಜ್ಞಾನ ಮತ್ತು ಕೃಷಿ ರಾಸಾಯನಿಕಶಾಸ್ತ್ರ ವಿಭಾಗ. ಮತ್ತು ಪಿ.ಎಚ್.ಡಿ ಪದವಿಯನ್ನು ತೋಟಗಾರಿಕೆ ವಿಷಯದಲ್ಲಿ ನೀಡಲಾಗುತ್ತಿದೆ.

2. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂದಾಗಿನಿಂದ ವಿದ್ಯಾರ್ಥಿಗಳ ನೊಂದಣಿ ಮತ್ತು ತೇರ್ಗಡೆಯ ವಿವರ:

ಕ್ರ.ಸಂ	ವರ್ಷ	ಬಿ.ಎಸ್ಸಿ (ತೋಟಗಾರಿಕೆ)		ಸ್ನಾತಕೋತ್ತರ ಎಂ ಎಸ್ಸಿ (ತೋಟಗಾರಿಕೆ)	
		ನೊಂದಣಿ ವಿವರ	ತೇರ್ಗಡೆ ವಿವರ	ನೊಂದಣಿ ವಿವರ	ತೇರ್ಗಡೆ ವಿವರ
1	2009–10	220	–	36	–
2	2010–11	362	29	96	13
3	2011–12	445	143	104	49
4	2012–13	529	218	136	94
5	2013–14	385		109	

ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ

ಅನುಬಂಧ–3

ಆ) ಕೇಂದ್ರ ಮತ್ತು ರಾಜ್ಯ ಸರ್ಕಾರದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಇಲ್ಲಿಯವರೆಗೆ ಮಂಜೂರು ಮಾಡಿದ ಅನುದಾನದ ವಿವರ ಈ ಕೆಳಗಿನಂತೆ ಇದೆ.

(₹ ಲಕ್ಷಗಳಲ್ಲಿ)

ವರ್ಷ	ರಾಜ್ಯ ಸರ್ಕಾರದ ಅನುದಾನ	ಕೇಂದ್ರ ಸರಕಾರದ ಅನುದಾನ	ಒಟ್ಟು ಅನುದಾನ
2007–08	800.00	0	800.00
2008–09	700.00	0	700.00
2009–10	3102.90	93.58	3196.48
2010–11	3675.00	706.84	4381.84
2011–12	7436.00	878.76	8314.76
2012–13	7900.00	924.56	8824.56
2013–14	6705.65	629.05	7334.70
ಒಟ್ಟು	**30319.55**	**3232.79**	**33552.34**

ಬಿ.ವಿ. ರಾಮಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ
ತೋಟಗಾರಿಕೆ ಇಲಾಖೆ